10) ವಿಷಯ : ಬಂಜಾರ, ಲಂಬಾಣಿಯವರ ಸಂಘದ ಶಿಕ್ಷಣ ಸಂಸ್ಥೆಗಳ ಮಾನ್ಯತೆಯನ್ನು ರದ್ದು ಮಾಡಿರುವ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : – ಮಾನ್ಯ ಅಧ್ಯಕ್ಷರೇ, ಬಂಜಾರ, ಲಂಬಾಣಿ ಯುವಕರ ಸಂಘ, ಇವರು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಅವರ ಈ ಸಂಘದ ವತಿಯಿಂದ 1981ರಿಂದ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. 1981 ರಿಂದ 2012 ರವರೆಗೆ ಅನುದಾನಕ್ಕೆ ಒಳಪಡುವ ಶಾಲೆಗಳಿವೆ. ಅನುದಾನಕ್ಕೆ ಒಳಪಡುವ 6 ಶಾಲೆಗಳು 1991ರಿಂದ 1992ರವೆರೆಗೆ ಇದು grant-in-aid ಗೆ Admit ಆಗದೇ ಇರುವಂಥದ್ದು, ಇವರು ನಡೆಸುತ್ತಿದ್ದಂಥವು, ಇವತ್ತು ಅಷ್ಟು ಪ್ರೌಢಶಾಲೆಗಳ ಮಾನ್ಯತೆಯನ್ನು ನಿಮ್ಮ ಸರ್ಕಾರ ರದ್ದು ಮಾಡಿದ್ದಾರೆ. ಅದಕ್ಕೆ ಬದಲಾದ ಕಾರಣಗಳೇನೂ ಇಲ್ಲ. 15 ವರ್ಷಗಳು ಸತತವಾಗಿ ನಡೆದಿರುವಂತಹ ಶಾಲೆಗಳನ್ನು ಅನುದಾನಕ್ಕೆ ಒಳಪಟ್ಟಿರುವಂತಹವನ್ನು 1991 ರಿಂದ ಅನುದಾನಕ್ಕೆ ಒಳಪಡದ ಶಾಲೆಗಳನ್ನು ಅದು ಪರಿಶಿಷ್ಟ ಜಾತಿಗೆ ಸೇರಿದ ಲಂಬಾಣಿ ಜನಾಂಗದವರು ನಡೆಸುತ್ತಿರುವ ಶಾಲೆಗಳನ್ನು ರದ್ದು ಮಾಡಿರುವುದು ಅನ್ಯಾಯ. ಅದನ್ನು ಯಾವುದೋ ದುರುದ್ದೇಶದಿಂದ ಮಾಡಿರಬೇಕೆಂದು ನನಗನಿಸುತ್ತದೆ. ಅಥವಾ ಇನ್ಯಾವುದೇ ಬೇರೆ ಬಲವಾದ ಕಾರಣಗಳಿಲ್ಲದೆ ಮಾಡಿದ್ದರೆ ಪರಿಶಿಷ್ಟ ಜಾತಿಯವರು ನಡೆಸುವ ಶಿಕ್ಷಣ ಸಂಸ್ಥೆಗಳಿಗೆ ದೊಡ್ಡ ಅನ್ಯಾಯವಾಗುತ್ತದೆ. ಅವರಿಗೆ ಸಂವಿಧಾನದಲ್ಲಿ ಶಿಕ್ಷಣ ಸಂಸ್ಥೆ ನಡೆಸಲು ಮಾನ್ಯತೆಯನ್ನು ರದ್ದು ಮಾಡಿರುವುದು ಸರಿಯಲ್ಲ. ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ. 1991 ರಿಂದ 1992 ರವರೆಗೆ 4 ಶಾಲೆಗಳಿವೆ. ಅವನ್ನು ಕೂಡಾ grant-in-aid ಗೆ admit ಮಾಡಿಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಅಲ್ಲಿರುವ ಸ್ಥಳೀಯ ರಾಜಕಾರಣಕ್ಕೆ ಇದನ್ನು ಮಾಡಿರುತ್ತಾರೆ. ನೀವು ಅವರು ಹೇಳಿದ್ದನ್ನು ಮಾಡಲು ಹೋಗಬಾರದು. ನೀವೂ apply your discretionary power and see that ಅವರ ಮಾನ್ಯತೆ ಏನು ರದ್ದಾಗಿದೆ ಅದು restore ಆಗುವ ರೀತಿಯಲ್ಲಿ ಮಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : – ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿಗೆ ಸೇರಿದ ಬಂಜಾರ ಯುವಕ ಸಂಘದ ಅಡಿಯಲ್ಲಿ ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಲ್ಲಿ ಎನು ಕೆಲವು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಆದರ ಆಡಳಿತ ಮಂಡಳಿಯ ಅಧ್ಯಕ್ಷರ ಜೊತೆಯಲ್ಲಿ ನಾನು ಸುದೀರ್ಘವಾಗಿ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿದ್ದೇನೆ.

ಕಳೆದ ಎರಡು ವರ್ಷಗಳಿಂದ ನಿರಂತವಾಗಿ ನಾನು ಅವರ ಜೊತೆಯಲ್ಲಿ ಚರ್ಚೆಯಲ್ಲಿದ್ದೇನೆ. ಆ ಸಂಸ್ಥೆಯಲ್ಲಿರುವ ಕೆಲವು ಸಮಸ್ಯೆಗಳು, ಸಿಬ್ಬಂದಿ ಸಮಸ್ಯೆ ಏನು ? ಈ ಎಲ್ಲಾ ವಿಷಯಗಳ ಬಗ್ಗೆ ಮುಕ್ತ ಮನಸ್ಸಿನಿಂದ ನಾನು, ಅವರು ಮತ್ತು ಶಿಕ್ಷಕರು ಚರ್ಚೆ ಮಾಡಿದ್ದೇವೆ. ನಮ್ಮ ಎಂ.ಎಲ್.ಎ./ಎಂ.ಎಲ್.ಸಿ. ಗಳು ಸಹ ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಅಲ್ಲಿ ಆಡಳಿತ ಮಂಡಳಿ ಹಾಗೂ ಶಿಕ್ಷಕರ ಮಧ್ಯೆ ಬಹಳ ದೊಡ್ಡ ಗೊಂದಲವಿದೆ. ಅನೇಕ ರೀತಿಯ ಸಮಸ್ಯೆಗಳಿವೆ. ಅವೆಲ್ಲವನ್ನೂ ಸರಿಪಡಿಸಲು ಬೇಕಾದ ಎಲ್ಲ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲು ಚರ್ಚೆಯ ಸಮಯದಲ್ಲಿ ಅನೇಕ ರೀತಿಯ ಸಲಹೆ ಸೂಚನೆಗಳನ್ನು ಕೊಟ್ಟು ಮಾತನಾಡಿದ್ದೇನೆ. ಆದಾಗ್ಯೂ ಕೆಲವು ಸಮಸ್ಯೆಗಳು ಮುಂದುವರೆದಿರುವ ಪರಿಣಾಮವಾಗಿ ಈ ರೀತಿ ಮಾನ್ಯತೆ ರದ್ದು ಪಡಿಸುವ ಹಂತಕ್ಕೆ ಹೋಗುತ್ತಿದೆ. ಹಾಗಾಗಿ ನಾನು ಅವರಲ್ಲಿಯೂ ವಿನಂತಿ ಮಾಡಿಕೊಂಡಿದ್ದೇನೆ. ಇದೊಂದು ಪ್ರತಿಷ್ಠಿತ ಸಂಸ್ಥೆಯಾಗಿ ಬೆಳೆಯಬೇಕು ಹಾಗಾಗಿ ಅಲ್ಲಿರುವ ಸಮಸ್ಯೆಗಳೇನಿವೆ, ಶಿಕ್ಷಕರ ಸೇವಾ ವಿಷಯ, ಮೂಲಭೂತ ಸೌಕರ್ಯಗಳ ವಿಷಯ ಅನೇಕ ರೀತಿಯ ಸಮಸ್ಯೆಗಳಿವೆ ನಾನು ಅವರ ಜೊತೆ ಮುಕ್ತವಾದ ಚರ್ಚೆಯಲ್ಲಿದ್ದೇನೆ. council ನಲ್ಲೂ ಈ ವಿಷಯ ಬಂದಿತ್ತು. ತಾವು ಕೇಳಿದಿರಿ. ಇದನ್ನು ಸರಿಪಡಿಸಲು ಅಗತ್ಯವಾದ ಎಲ್ಲ ಸಲಹೆ ಸೂಚನೆಗಳನ್ನು ಸಹಕಾರವನ್ನು ಸರ್ಕಾರ ಕೊಡಲು ಸಿದ್ಧವಿದೆ. ಅದೇ ರೀತಿ ಸಂಸ್ಥೆಯಲ್ಲಿರುವ ಸಿಬ್ಬಂದಿ ಸಮಸ್ಯೆಯನ್ನು ಕೇಳಬೇಕಾದ್ದು. ಮೂಲಭೂತ ಸೌಕರ್ಯಗಳನ್ನು ಕೊಡಬೇಕಾದದ್ದು ಸರ್ಕಾರದ ಜವಾಬ್ದಾರಿ. ಆ ಹಿನ್ನಲೆಯಲ್ಲಿ ಏನು ಮಾತುಕತೆ ನಡೆದಿದೆ ಅದನ್ನು ಮುಂದುವರೆಸುತ್ತೇವೆ ಮತ್ತು ಅವರಿಗೆ ಅಗತ್ಯವಾದ ಸೂಚನೆ ಕೊಡುತ್ತೇನೆ. ಕಾನೂನಿನಡಿಯಲ್ಲಿ ಏನು ಅನುಕೂಲ ಮಾಡಲು ಸಾಧ್ಯವಿದೆ ಅದನ್ನು ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಅನೇಕ ಎಸ್.ಸಿ./ಎಸ್.ಟಿ. ಶಿಕ್ಷಣ ಸಂಸ್ಥೆಗಳಿದ್ದು, ಅವು ನಮಗೆ ಹೆಮ್ಮೆ ತರುವ ರೀತಿಯಲ್ಲಿ ರಾಜ್ಯದ ಉದ್ದಗಲಕ್ಕೂ ಬಹಳ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಆದರೆ ಈ ಹೆಸರಿನಲ್ಲಿ ಮೂಲಭೂತ ಸೌಕರ್ಯಗಳು ಇಲ್ಲದೆ ಅಥವಾ ಯಾವುದೇ ರೀತಿಯ ಸಿಬ್ಬಂದಿಗಳಿಗೆ ಬೇಕಾದ ಅಗತ್ಯ ವಾತಾವರಣವೂ ಇಲ್ಲದೆ ಬಹಳ ಕಷ್ಟ ಸ್ಥಿತಿಯನ್ನು ಅನುಭವಿಸುತ್ತಿರುವ ಸಂಸ್ಥೆಗಳು ಯಾವುವು ಇವೆ ಅವುಗಳ ಸ್ಥಿತಿಯನ್ನು ಸರಿಪಡಿಸಲು ವಿನಂತಿ ಮಾಡುತ್ತೇನೆ. ಅದಕ್ಕೆ ಬೇಕಾದ ಅಗತ್ಯ ಕ್ರಮವನ್ನು ಸರ್ಕಾರದಿಂದಲೂ ತೆಗೆದುಕೊಳ್ಳುವ ಪ್ರಯತ್ನ ಮಾಡಿದ್ದೇನೆ.

ಶ್ರೀ ಸಿದ್ದರಾಮಯ್ಯ : – ಮಾನ್ಯ ಶಿಕ್ಷಣ ಸಚಿವರೆ, Management and Teachers ಮಧ್ಯೆ ಹೊಂದಾಣಿಕೆ ಇಲ್ಲದೆ ಹೋದರೆ ಅಥವಾ Management ನವರಿಗೆ ಸಂಬಳ ಕೊಡಲು ಸಮಸ್ಯೆ ಇದ್ದರೆ ಅದನ್ನು ಹೇಳಿ ಸರಿಪಡಿಸುವ ಕೆಲಸ ಆಗಬೇಕು. ನಂಬರ್–1, ನಂಬರ್–2, 30 ವರ್ಷಗಳಿಗೂ ಹೆಚ್ಚು ನಡೆದಿರುವಂತಹ Institutions. 1981-82 ನಲ್ಲಿ ಪ್ರಾರಂಭವಾಗಿದೆ ಎಂದರೆ ಈಗ 30 ವರ್ಷಗಳಾಯಿತು. ಇನ್ನು ಒಂದು 4 institutions, ಪ್ರೌಢಶಾಲೆಗಳು ಪ್ರಾರಂಭವಾಗಿ 20 ವರ್ಷಗಳಾಗಿವೆ. ಒಂದು 30 ವರ್ಷ, ಒಂದು 20 ವರ್ಷ ಆಗಿರುವುದನ್ನು ರದ್ದು ಮಾಡುವುದು ಸರಿಯಾದ ಕ್ರಮವಲ್ಲ. ಮತ್ತೆ ಪರಿಶಿಷ್ಟ ಜಾತಿಯವರು ನಡೆಸುತ್ತಿರುವ ಸಂಸ್ಥೆಗಳು. ಅವುಗಳಲ್ಲಿ ಏನಾದರೂ ನ್ಯೂನತೆಗಳಿದ್ದರೆ ಸರಿಪಡಿಸಿ ಮುಂದುವರೆಸಲು ಏನು ಮಾಡಬೇಕು. ಆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ. ಅವರಿಗೆ categorical ಅಗಿ assurance ಕೊಟ್ಟರೆ ಅನುಕೂಲವಾಗುತ್ತದೆ. ಪಾಪ ಈಗಾಗಲೇ ತೊಂದರೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. 1991 ರಿಂದ grant-in-aid ಗೆ admit ಮಾಡಿಲ್ಲ. ಅಲ್ಲಿ ಸ್ವಲ್ಪ ರಾಜಕಾರಣ ಇದೆ. ರಾಜಕಾರಣ ಏನೇ ಇರಲಿ. Education Institution ನಡೆಸುವವರು Teachers and Management ನಡುವೆ ಸಾಮರಸ್ಯ ಇರಬೇಕು. ಇಲ್ಲದಿದ್ದರೆ ಅಲ್ಲಿ ಓದುವ ವಿದ್ಯಾರ್ಥಿಗಳಿಗೆ ಅನಾನುಕೂಲವಾಗಿ ತೊಂದರೆಯಾಗುತ್ತದೆ. ಅದನ್ನು ಮುಂದುವರೆಸಲು ಮತ್ತು 1991–92 ರಿಂದ ಏನು 4 ಹೈಸ್ಕೂಲ್‌ಗಳಿವೆ ಅವುಗಳನ್ನು ಕೂಡಾ grant-in-aid ಗೆ admit ಮಾಡುವ ಕೆಲಸ ಮಾಡಬೇಕು. Categorical Assurance ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : – ತಾವು ಹಿರಿಯ ಸದಸ್ಯರಿದ್ದೀರಿ, ನಿಮಗೆ ತಿಳಿದಿದೆ. ನಿಯಮಾವಳಿಯ ಪ್ರಕಾರ, ಕಾನೂನಿನ ಪ್ರಕಾರ ಏನೆಲ್ಲಾ ಸಲಹೆ ಸಹಕಾರ ಕೊಡಲು ಸಾಧ್ಯವಿದೆ. ಅದನ್ನು ಕೊಡತ್ತೇನೆ. ಅದರೆ ಅಲ್ಲಿ ಸಮಸ್ಯೆ ಅಳವಾಗಿದೆ. ಅದನ್ನು ಬಗೆಹರಿಸಲಿಕ್ಕೆ ಆಡಳಿತ ಮಂಡಳಿ ಜವಾಬ್ದಾರಿಯಿಂದ ಕೆಲಸ ಮಾಡದೆ ಹೋದರೆ ಈ ಸಂಸ್ಥೆಗಳು ನಿಜವಾಗಿ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತವೆ. ನಾನು ಇದನ್ನು ಮುಕ್ತವಾಗಿ ಅವರ ಜೊತೆಯಲ್ಲಿ ಅನೇಕ ಸಂದರ್ಭದಲ್ಲಿ ಚರ್ಚಿಸಿದ್ದೇನೆ.

ಶ್ರೀ ಸಿದ್ದರಾಮಯ್ಯ : – Management ನಲ್ಲಿರುವ ಅವರನ್ನು ನಾನು ನಿಮ್ಮ ಬಳಿ ಕಳುಹಿಸಿಕೊಡುತ್ತೇನೆ. ಅವರು Ex-minister.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : – ಗೊತ್ತು, ಅವರು ನನ್ನ ಒಳ್ಳೆಯ ಸ್ನೇಹಿತರು. ಒಟ್ಟಿಗೆ ನಮ್ಮ ಪಕ್ಷದಲ್ಲಿ ಕೆಲಸ ಮಾಡಿದವರು.

ಶ್ರೀ ಸಿದ್ದರಾಮಯ್ಯ : – ಒಳ್ಳೆಯ ಸ್ನೇಹಿತರಿಗೆ ಅನ್ಯಾಯವಾದರೆ ಹೇಗೆ ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : – ಹಾಗೆ ಮಾಡಲಿಕ್ಕೆ ಬಿಡುವುದಿಲ್ಲ. ನಾವು ಚರ್ಚೆ ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ : – ಹಾಗಾಗಲೂ ಬಿಡಬಾರದು. ಆ ಸಮಸ್ಯೆ ಬಗೆಹರಿಸಿ, ಅದನ್ನು ಮುಂದುವರೆಸಲೂ ಏನು ಬೇಕು ಅದನ್ನು ಮಾಡಿ ಕೊಡಿ.

ಅಧ್ಯಕ್ಷರು : – ಶ್ರೀ ಸಿದ್ದಾರಮಯ್ಯನವರೇ, ತಮ್ಮದು ಇನ್ನೊಂದು ಶೂನ್ಯ ವೇಳೆ ಪ್ರಸ್ತಾವನೆ ಇದೆ. ಕೇಳಿ.

11) ವಿಷಯ : ಪರಿಶಿಷ್ಟ ಜಾತಿ, ಪಂಗಡಗಳ ಅಲೆಮಾರಿ, ಅರೆ ಅಲೆಮಾರಿ ಜನಾಂಗಕ್ಕೆ ಸೇರಿದ ಪ್ರತಿಭಾವಂತ ಬಡ ಮಕ್ಕಳು ಗುಣಮಟ್ಟದ ಶಿಕ್ಷಣ ಪಡೆಯುವ ಉದ್ದೇಶದಿಂದ ಮಾಡಿರುವ ಪ್ರತಿಷ್ಠಿತ ಶಾಲೆ ಯೋಜನೆ ರದ್ದು ಪಡಿಸಿರುವ ಬಗ್ಗೆ.

ಶ್ರೀ ಸಿದ್ದರಾಮಯ್ಯ : – ಶ್ರೀ ನಾರಾಯಣಸ್ವಾಮಿಯವರೆ, social welfare minister ಈ ಪ್ರತಿಷ್ಠಿತ ಶಾಲೆಗಳ ಯೋಜನೆ ಎಂದು ಇದೆಯಂತಲ್ಲ. ಅದನ್ನು ನಮ್ಮ ರಾಜ್ಯದಿಂದ ಏನೋ ಬೇರೆ ಕಡೆಗೆ ಕೊಟ್ಟು ಬಿಟ್ಟಿದ್ದೀರಂತಲ್ಲ ಇಲ್ಲಾ, ಇಲ್ವೆ ಇದೆಯಾ ? ಕುಳಿತುಕೊಳ್ಳಿ, ಒಂದೇ ಸಾರಿ ಎದ್ದು ಬಿಟ್ಟರೆ ಹೇಗೆ ? ಈ ಪರಿಶಿಷ್ಟ ಜಾತಿ, ಪಂಗಡಗಳ ಅಲೆಮಾರಿ, ಅರೆ ಅಲೆಮಾರಿ ಜನಾಂಗಕ್ಕೆ ಸೇರಿದ ಪ್ರತಿಭಾವಂತ ಬಡ ಮಕ್ಕಳು ಗುಣಮಟ್ಟದ ಶಿಕ್ಷಣ ಪಡೆಯುವ ಉದ್ದೇಶದಿಂದ ಮಾಡಿರುವ ಯೋಜನೆ. ಇದನ್ನೇನೋ ರದ್ದು ಪಡಿಸಿದ್ದೀರಂತಲ್ಲ, ಇಲ್ಲವೋ ? ರದ್ದು ಪಡಿಸಿದೆ ಹೋದರೆ ಮಕ್ಕಳಿಗೆ ಅನುಕೂಲವಾಗುವ ರೀತಿಯಲ್ಲಿ ಇಲ್ಲಿಯೇ ಮಾಡಬೇಕು. ಯಾರು ಅದನ್ನು ಮಾಡುತ್ತಿದ್ದಾರೆ ಅವರಿಗೆ ಸಹಾಯ ಮಾಡುವ ಕೆಲಸ ಮಾಡಬೇಕು.

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು) : – ಪರಿಶಿಷ್ಟ ಜಾತಿ, ಪಂಗಡಗಳ ಅಲೆಮಾರಿ, ಅರೆ ಅಲೆಮಾರಿ ಸಮಾಜಕ್ಕೆ ಉನ್ನತ ಶಿಕ್ಷಣ ನೀಡುವ ಪ್ರತಿಷ್ಠಿತ ಶಾಲೆಗಳಿಗೆ ಅವಶ್ಯ ಅನುದಾನ